**28/09/23** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ತಂದೆಯೊಂದಿಗೆ ಪ್ರೀತಿ ಮತ್ತು ಗೌರವವನ್ನಿಟ್ಟುಕೊಳ್ಳಿ ಆಗ ತಂದೆಯ ಆಶೀರ್ವಾದ ಸಿಗುತ್ತಾ ಇರುವುದು. ಮಾಯೆಯ ತುಕ್ಕು ಬಿಡುತ್ತಾಹೋಗುವುದು"

ಪ್ರಶ್ನೆ: ; ಈ ಚೈತನ್ಯ ತೋಟದಲ್ಲಿ ಕೆಲವು ಹೂಗಳು ಅರಳುವುದೇ ಇಲ್ಲ, ಮೊಗ್ಗುಗಳಾಗಿಯೇ ಉಳಿದುಬಿಡುತ್ತಾರೆ ಏಕೆ?

ಉತ್ತರ: ಏಕೆಂದರೆ ಪುರುಷಾರ್ಥದಲ್ಲಿ ಆಲಸ್ಯವಿರುತ್ತದೆ, ನೆನಪು ಮಾಡುವ ಸಮಯದಲ್ಲಿ ಮಲಗಿರುತ್ತಾರೆ, ಮಲಗಿರುವವರು ತಮ್ಮ ಸಮಯವನ್ನು ಹಾಗೆಯೇ ಕಳೆದುಕೊಳ್ಳುವರು. ಮುಚ್ಚಿರುವ ಮೊಗ್ಗಾಗಿಯೇ ಉಳಿದುಬಿಡುತ್ತಾರೆ. ಯಾರು ದೇವಿ-ದೇವತಾ ಧರ್ಮದ ಆಲ್ರೌಂಡ್ ಪಾತ್ರದಾರಿಯಾಗಿದ್ದಾರೆಯೋ ಅವರು ಸದಾ ಗುಲಾಬಿ ಹೂಗಳಾಗಿದ್ದಾರೆ.

ಗೀತೆ: ಈ ಸಮಯ ಹೋಗುತ್ತಿದೆ..............

ಓಂ ಶಾಂತಿ. ಇದನ್ನು ಯಾರು ತಿಳಿಸಿದರು? ಬೇಹದ್ದಿನ ತಂದೆಯು ಮಕ್ಕಳಿಗೆ ತಿಳಿಸಿದರು. ಬೇಹದ್ದಿನ ಯಾವ ಗಡಿಯಾರವಿದೆ. ಅದರಲ್ಲಿ ಈಗ ಕೆಲವು ನಿಮಿಷಗಳು ಮಾತ್ರ ಉಳಿದಿವೆ. ಘಂಟೆಗಳು ಕಳೆದುಹೋಯಿತು, ಬಾಕಿ ಕೆಲವು ನಿಮಿಷಗಳಷ್ಟೇ ಉಳಿದಿವೆ. ಯಾರು ಬುದ್ಧಿವಂತ ಮಕ್ಕಳಿದ್ದಾರೆ ಅವರೇ ಅರಿತುಕೊಳ್ಳುತ್ತಾರೆ, ನಂಬರ್ವಾರಂತೂ ಇರುತ್ತಾರಲ್ಲವೆ. ಗುಲಾಬಿ ಹೂಗಳಲ್ಲಿಯೂ ಸಹ ನಂಬರ್ವಾರ್ ಇರುತ್ತವೆಯಲ್ಲವೆ. ಇಲ್ಲಿಯೂ ಸಹ ಗುಲಾಬಿ ಹೂಗಳಿದ್ದಾರೆ ಆದರೆ ಅದರಲ್ಲಿಯೂ ಕೆಲವರು ಎಳೆಯ ಮೊಗ್ಗುಗಳಾಗಿದ್ದಾರೆ, ಇನ್ನೂ ಕೆಲವರು ಸ್ವಲ್ಪ ಅರಳಿದ್ದಾರೆ. ನಿಮ್ಮ ದೇವಿ-ದೇವತಾ ಧರ್ಮದವರೂ ಸಹ ಹೇಗೆ ಸದಾ ಗುಲಾಬಿಯಾಗಿದ್ದಾರೆ, ಸದಾ ಆಲ್ರೌಂಡ್ ಪಾತ್ರವನ್ನಭಿನಯಿಸುವವರಾಗಿದ್ದಾರೆ. ನೀವು ಎಲ್ಲಾ ಧರ್ಮದವರಲ್ಲಿ ಶ್ರೇಷ್ಠಾತಿ ಶ್ರೇಷ್ಠ ಧರ್ಮದ ಸದಾ ಗುಲಾಬಿಯಾಗಿದ್ದೀರಿ. ಅನ್ಯ ಧರ್ಮದವರು ನಂಬರ್ವಾರ್ ಆಗಿದ್ದಾರೆ, ಕೆಲವರು ಸಂಪಿಗೆ ಹೂಗಳಾಗಿದ್ದಾರೆ, ಕೆಲವರು ಮಲ್ಲಿಗೆ, ಕೆಲವರು ಎಕ್ಕದ ಹೂಗಳಾಗಿದ್ದಾರೆ. ಇದು ಹೂದೋಟವಾಗಿದೆಯಲ್ಲವೆ. ಎಲ್ಲಾ ಧರ್ಮಗಳ ಹೂದೋಟವಾಗಿದೆ. ಶ್ರೇಷ್ಠಾತಿ ಶ್ರೇಷ್ಠ ಧರ್ಮವು ದೇವಿ-ದೇವತೆಗಳದ್ದೇ ಆಗಿದೆ ಎಂದು ಮಕ್ಕಳಿಗೆ ಗೊತ್ತಿದೆ. ಯಾವಾಗ ಋತು (ಸೀಜನ್) ಇರುವುದಿಲ್ಲವೋ ಆಗ ಚಿಗರೂ ಇರುವುದಿಲ್ಲ, ಮೊಗ್ಗು-ಹೂಗಳೂ ಇರುವುದಿಲ್ಲ (ಇಂದು ಬಾಬಾರವರು ಹೂದೋಟದಿಂದ ಒಂದು ದೊಡ್ಡ ಗುಲಾಬಿಯ ಹೂ, ಒಂದು ಚಿಕ್ಕಹೂ, ಒಂದು ಅರ್ಧ ಅರಳಿರುವ ಹೂ, ಒಂದು ಮೊಗ್ಗು, ಒಂದು ಪೂರ್ಣ ಎಳೆಯ ಮೊಗ್ಗು, ಒಂದು ಚಿಗುರು.. ಹೀಗೆ ಅನೇಕ ಪ್ರಕಾರದ ಹೂವುಗಳನ್ನು ತಂದು ಬುಟ್ಟಿಯಲ್ಲಿಟ್ಟಿದ್ದಾರೆ) ಈಗ ನೋಡಿ - ಈ ಚಿಗುರೂ ಸಹ ಕೆಲವು ಇನ್ನೂ ಎಳೆಯದಾಗಿದೆ, ಕೆಲವು ಅರ್ಧ ಚಿಗುರಿದೆ, ಕೆಲವು ಹೂಗಳಾಗಿವೆ, ಕೆಲವು ಎಳೆ ಮೊಗ್ಗುಗಳಾಗಿವೆ, ಕೆಲವು ಬಾಡಿಹೋಗುತ್ತವೆ, ಕೆಲವು ಅರಳುವುದೇ ಇಲ್ಲ. ಸರಿಯಾಗಿ ಇದೇ ರೀತಿ ಇದ್ದಾರಲ್ಲವೆ. ಆದ್ದರಿಂದ ತಂದೆಯು ತಿಳಿಸುತ್ತಾರೆ - ಪುರುಷಾರ್ಥದಲ್ಲಿ ಆಲಸ್ಯ ಮಾಡಬೇಡಿ. ಹೀಗೆ ಮೊಗ್ಗಾಗಿಯೇ ಉಳಿಯಬೇಡಿ. ಕೆಲವರು ಅರ್ಧದಲ್ಲಿಯೇ ಉಳಿಯುತ್ತಾರೆ, ನಂಬರ್ವಾರ್ ಇದ್ದಾರೆ. ಈ ಸ್ಥಿತಿಯಲ್ಲಿ ಇವರು ಯಾವ ಪದವಿಯನ್ನು ಪಡೆಯಬಹುದು ಎಂದು ತಿಳಿದುಕೊಳ್ಳಬಹುದು. ಸಮಯವು ಬಹಳ ಹತ್ತಿರ ಇದೆ, ಗಡಿಯಾರ ಮಾಡಲ್ಪಟ್ಟಿದೆ. ಅದರ ಮುಳ್ಳನ್ನು ಈಗ ಬದಲು ಮಾಡಲು ಸಾಧ್ಯವಿಲ್ಲ. ಯುಕ್ತಿಯಿಂದ ಈ ರೀತಿ ಮಾಡಬೇಕು, ಅದು ಸ್ಮಾರಕವಾಗಿ ಉಳಿಯಬೇಕು. ಇಲ್ಲಿಂದ ಪ್ರಾರಂಭವಾಗಿ ಮುಳ್ಳು ಈಗ ಇಲ್ಲಿಯವರೆಗೆ ಬಂದು ತಲುಪಿದೆ. ಸೊನ್ನೆಯಿಂದ ಪ್ರಾರಂಭವಾಗಿ ಮತ್ತೆ ಆ ಮುಳ್ಳು 12 ಘಂಟೆಯವರೆಗೆ ಬಂದು ಮುಕ್ತಾಯವಾಗುತ್ತದೆ ಅದೇ ರೀತಿ ಈ ಚಕ್ರದಲ್ಲಿಯೂ ಮೊದಲು ದೇವಿ-ದೇವತಾಧರ್ಮದಿಂದ ಹೊರಟು, ಈಗ ಅಂತ್ಯದಲ್ಲಿದೆ. ಯಾವಾಗಿನಿಂದ ತಂದೆಯು ಬಂದಿರುವರು ಆಂದಿ ನಿಂದ ಲೆಕ್ಕ ಪ್ರಾರಂಭವಾಗುತ್ತದೆ.

ತಂದೆಯು ತಿಳಿಸುತ್ತಾರೆ - ಮಕ್ಕಳೇ, ಸಮಯವನ್ನು ವ್ಯರ್ಥ ಮಾಡಬೇಡಿ. ತಂದೆಯನ್ನು ನೆನಪು ಮಾಡುತ್ತಾ ಇರಿ. ಎಷ್ಟು ನೆನಪು ಮಾಡುತ್ತಾ ಇರುತ್ತಿರೋ ಅಷ್ಟು ವಿಕರ್ಮ ವಿನಾಶವಾಗುತ್ತದೆ. ವಿಕರ್ಮಗಳಂತೂ ಎಲ್ಲರಿಂದ ಆಗುತ್ತಿರುತ್ತವೆ. ನಮ್ಮಿಂದ ಆಗುವುದಿಲ್ಲವೆಂದು ತಿಳಿಯಬೇಡಿ. ಇಷ್ಟು ಅಹಂಕಾರವನ್ನು ಯಾರೂ ಇಟ್ಟುಕೊಳ್ಳಬೇಡಿ. ವಿಕರ್ಮಗಳಂತೂ ಬಹಳ ಗುಪ್ತವಾಗಿಯೇ ಆಗುತ್ತಿರುತ್ತವೆ ಇದರಿಂದಲೂ ಬಹಳ ಎಚ್ಚರಿಕೆ ವಹಿಸಬೇಕು. ಈ ಗಡಿಯಾರದಿಂದ ನಿಮಗೆ ಸಮಯದ ಬಗ್ಗೆ ಗೊತ್ತಾಗಯೇ ಬಿಡುತ್ತದೆ. ಮನುಷ್ಯರು ಕಲಿಯುಗವು ಇನ್ನೂ ಮಗುವಾಗಿದೆ ಎಂದು ತಿಳಿಯುತ್ತಾರೆ. ಸಂಪೂರ್ಣ ಘೋರ ಅಂಧಕಾರದಲ್ಲಿ ಮುಳುಗಿದ್ದಾರೆ. ಈಗ ನೀವು ಶವಗಳನ್ನು ಎಬ್ಬಿಸಬೇಕಾಗಿದೆ. ಮುಂಜಾನೆ ಎದ್ದು ತಂದೆಯನ್ನು ನೆನಪು ಮಾಡಬೇಕಾಗಿದೆ. ಯಾರು ಮಲಗುವರೋ ಅವರು ಕಳೆದುಕೊಳ್ಳುವರು ಅಂದರೆ ನೆನಪು ಮಾಡಲು ಯಾವ ಸಮಯವಿದೆ ಅದನ್ನು ಕಳೆದುಕೊಳ್ಳಬಾರದು ಇಲ್ಲವೆಂದರೆ ಶವಕ್ಕೆ ಶವವಾಗಯೇ ಉಳಿದುಬಿಡುತ್ತಾರೆ. ಕೆಲವರಂತೂ ಮೊಗ್ಗುಗಳಾಗಿಯೇ ಉಳಿದುಬಿಡುತ್ತಾರೆ. ಬಿರುಗಾಳಿಯಲ್ಲಿ ಒಳ್ಳೊಳ್ಳೆಯ ಮೊಗ್ಗುಗಳು ಸಹ ಬೀಳುತ್ತದೆ. ಹೂವುಗಳು ಬೀಳುತ್ತವೆ ಮತ್ತು ಮೊಗ್ಗುಗಳು ಬೀಳುತ್ತವೆ. ಹೇಗೆ ಮುಳ್ಳುಗಳು ಮುಳ್ಳುಗಳಾಗಿಯೇ ಉಳಿದು ಬಿಡುತ್ತಾರೆ. ದೈವೀ ಮನೆತನದಲ್ಲಂತೂ ಬರುತ್ತಾರೆ ಆದರೆ ಪ್ರಜೆಗಳಲ್ಲಿ ಬರುತ್ತಾರೆ. ನೀವಂತೂ

ಗುಲಾಬಿ ಗಿಡದ ಹೂವಾಗಿದ್ದೀರಿ ಆದರೆ ಇದರಲ್ಲಿಯೇ ಖುಷಿಯಾಗಿಬಿಡಬಾರದು. ಇಂತಹವರು ಸ್ವರ್ಗವಾಸಿಯಾದರೆಂದು ಭಲೇ ಮನುಷ್ಯರು ಹೇಳುತ್ತಾರೆ. ಆದರೆ ಏನಾದರು? ಇದಕ್ಕೆ ಕಾರಣವು ಇರಬೇಕಲ್ಲವೆ? ಇದನ್ನು ಮಕ್ಕಳೇ ತಿಳಿದುಕೊಳ್ಳಲು ಸಾಧ್ಯ. ಯಾರು ತಂದೆಗೆ ಅತೀ ಹೆಚ್ಚಿನ ಸೇವಾಧಾರಿ ಮಗುವಾಗಿರುವರೋ ಅವರು ತಂದೆಗೆ ಅಷ್ಟೆ ಪ್ರಿಯರಾಗಿರುತ್ತಾರೆ. ಇದಂತೂ ಸಾಮಾನ್ಯ ಮಾತಾಗಿದೆ. ಸುಪುತ್ರರು, ಆಜ್ಞಾಕಾರಿಗಳು ಪ್ರಾಮಾಣಿಕ ಮಕ್ಕಳು ತಂದೆ-ತಾಯಿಗೆ ಪ್ರಿಯರೆನಿಸುತ್ತಾರೆ. ಮಾಯೆಯು ಸಂಪೂರ್ಣ ಅಪ್ರಾಮಾಣಿಕರನ್ನಾಗಿ ಮಾಡಿಬಿಡುತ್ತದೆ. ನಮ್ಮಿಂದ ಇಂತಹ ದೊಡ್ಡ ತಪ್ಪಾಗುತ್ತದೆ ಎಂದು ತಿಳಿಯುವುದೇ ಇಲ್ಲ. ತಂದೆಯು ತಿಳಿಸುತ್ತಾರೆ ಯಾರು ಮಾಡುತ್ತಾರೆಯೋ ಅವರು ಅದನ್ನು ಪಡೆಯಲೇ ಬೇಕಾಗುತ್ತದೆ. ಶಿಕ್ಷೆಗಳನ್ನು ಅನುಭವಿಸುವಂತಹ ವಿಕರ್ಮಗಳನ್ನು ಮಾಡಬಾರದು. ಕೆಲವು ವಿಕರ್ಮಗಳಿಗೆ ಇಲ್ಲಿಯೂ ಸಹ ಶಿಕ್ಷೆಯನ್ನು ಪಡೆಯುತ್ತಾರೆ. ಕರ್ಮ ಭೋಗವಾಗಿದೆ, ಗರ್ಭ ಜೈಲಿನಲ್ಲಿಯೂ ಕರ್ಮ ಭೋಗವಿರುತ್ತದೆ ಆದರಿಂದ ಬಹಳ ಎಚ್ಚರಿಕೆಯಿಂದ ಬಿಡಿಸಿಕ್ಕೊಳ್ಳಬೇಕಾಗಿದೆ, ಮಾಯೆಯು ದೊಡ್ಡ ಶತ್ರುವಾಗಿದೆ ಆದ್ದರಿಂದ ಅತೀ ಪ್ರಿಯಾತಿಪ್ರಿಯ ತಂದೆಯನ್ನು ಪ್ರತಿ ಸಮಯ ನೆನಪು ಮಾಡಬೇಕು. ಹೇಗೆ ಲೌಕಿಕ ತಂದೆಯು ತನ್ನ ಮಕ್ಕಳನ್ನು ಅರಿತುಕೊಂಡಿರುತ್ತಾರೆಯೋ ಹಾಗೆಯೇ ಪಾರಲೌಕಿಕ ತಂದೆಯೂ ಸಹ ಪ್ರತಿಯೊಬ್ಬ ಮಗುವನ್ನು ಅರಿತುಕೊಂಡಿರುತ್ತಾರೆ. ಸ್ವಯಂ ತಂದೆಯೇ ಬಂದು ಕುಳಿತು ತಿಳಿಸುತ್ತಾರೆ - ನಾನು ಈ ಒಂದೇ ಶರೀರದಲ್ಲಿ ಬರುತ್ತೇನೆ. ಎಷ್ಟೊಂದು ಮಕ್ಕಳಿದ್ದಾರೆ ಮುಂದೆ ಹೋದಂತೆ ಇನ್ನೂ ಅನೇಕರು ಬರುತ್ತಾರೆ. ವೃಕ್ಷವು ವೃದ್ಧಿ ಹೊಂದುತ್ತದೆ. ಭಗವಂತನ ಮುಂದೆ ಭಕ್ತರ ಜನಸಂದಣಿ ಆಗುತ್ತದೆ. ಶಿವನ ಮಂದಿರದಲ್ಲಿ ಇಷ್ಟೊಂದು ಸಾಲು ಇರುವುದಿಲ್ಲ. ಇಲ್ಲಂತೂ ನಿಮಗೆ ಗೊತ್ತಿದೆ - ಎಷ್ಟು ದೊಡ್ಡ ಸಾಲಿರುವುದು. ಸೂರ್ಯವಂಶಿ ಮತ್ತು ಚಂದ್ರವಂಶಿ ರಾಜಧಾನಿಯು ಸ್ಥಾಪನೆಯಾಗಲಿದೆ. ಈ ಮಾತುಗಳನ್ನು ತಿಳಿಯುವಲ್ಲಿ ಬಹಳ ವಿಶಾಲ ಬುದ್ಧಿ ಬೇಕು. ಸರಿಯಾಗಿಯಾವ ಭಕ್ತರು ಇಷ್ಟೊಂದು ಭಕ್ತಿ ಮಾಡುತ್ತಾರೆ ಅವರ ಸಮ್ಮುಖದಲ್ಲಿ ಭಗವಂತ ಬಂದರೆ ಎಷ್ಟು ದೊಡ್ಡ ಜನಸಂದಣಿಯಾಗುವುದು.

ನಮಗೆ ತಂದೆಯು ರಾಜಯೋಗವನ್ನು ಕಲಿಸುತ್ತಿದ್ದಾರೆಂದು ನೀವು ಮಕ್ಕಳಿಗೆ ಗೊತ್ತಿದೆ. ಆದರೆ ಮನೆಯಲ್ಲಿದ್ದರೂ ಸಹ ಮರೆತುಹೋಗುತ್ತೀರಿ. ಇದು ಎಂತಹ ವಿಚಿತ್ರದ ಮಾತಾಗಿದೆ - ಜೊತೆಯಲ್ಲಿದ್ದರೂ ಸಹ ಮರೆತುಹೋಗುತ್ತಾರೆ. ಇಷ್ಟೊಂದು ಪ್ರೀತಿ-ಗೌರವವಿರುವುದಿಲ್ಲ. ಸೂಜಿಗೆ ತುಕ್ಕು ಹಿಡಿದಿದ್ದರೆ ಅದು ಅಯಾಸ್ಕಾಂತವನ್ನು ಆಕರ್ಷಿಸಲು ಸಾಧ್ಯವಿಲ್ಲ. ಯೋಗ ಮತ್ತು ಜ್ಞಾನ ಎರಡೂ ಇದ್ದಾಗ ತುಕ್ಕು ಬಿಟ್ಟು ಹೋಗುವುದು ಮತ್ತು ಪರಮಾತ್ಮನ ಆರ್ಶಿವಾದವು ಬೇಕಲ್ಲವೆ. ಮಾಯೆಯ ತುಕ್ಕು ಹಿಡಿದಿದೆ, ಯಾವುದೇ ವಸ್ತುವಿಗೆ ತುಕ್ಕು ಹಿಡಿದಿದ್ದರೆ ಅದನ್ನು ಸೀಮೆಎಣ್ಣೆಯಲ್ಲಿ ಹಾಕುತ್ತಾರೆ. ನಿಮ್ಮದೂ ಸಹ ಯೋಗದಿಂದಲೇ ತುಕ್ಕು ಬಿಡುತ್ತದೆ. ಆತ್ಮವು ಪವಿತ್ರವಾಗಿಬಿಡುತ್ತದೆ. ಆದ್ದರಿಂದ ತಂದೆಯು ತಿಳಿಸುತ್ತಾರೆ - ಮಕ್ಕಳೇ, ಹೂವುಗಳಾಗಿ ತೋರಿಸಿ. ಆ ಸಮಯವು ಸಹ ಬೇಗ ಬರುವುದು. ನೀವು ಯಾರ ಸಮ್ಮುಖದಲ್ಲಿ ಕುಳಿತುಕೊಳ್ಳುವಿರೋ. ಅವರಿಗೆ ತಕ್ಷಣ ಸಾಕ್ಷಾತ್ಕಾರವಾಗುತ್ತಾ ಹೋಗುವುದು. ಬ್ರಹ್ಮಾ ಮತ್ತು ವಿಷ್ಣುವಿನ ಸಾಕ್ಷಾತ್ಕಾರವು ಅನೇಕರಿಗೆ ಆಗುವುದು. ಬ್ರಹ್ಮಾಕುಮಾರ-ಕುಮಾರಿಯರ ಬಳಿ ಹೋಗಿ ಎಂದು ಸೂಚನೆ ನೀಡುತ್ತಾರೆ. ಬ್ರಹ್ಮಾರವರೂ ಕುಳಿತಿದ್ದಾರೆ, ಬ್ರಹ್ಮಾಕುಮಾರ-ಕುಮಾರಿಯರು ಕುಳಿತಿದ್ದೀರಿ. ಮುಂದೆ ಹೋದಂತೆ ಅನೇಕರಿಗೆ ಸಾಕ್ಷಾತ್ಕಾರವಾಗುವುದು. ಬಾಬಾ ಸಾಕ್ಷಾತ್ಕಾರ ಮಾಡಿಸುತ್ತಾರೆ ನೀವು ಅಲ್ಲಿಗೆ ಹೋಗಿ, ನಾನು ಅಲ್ಲಿ ರಾಜಯೋಗವನ್ನು ಕಲಿಸುತ್ತಿದ್ದೇನೆ, ಇದರಿಂದ ನೀವು ಈ ಪದವಿಯನ್ನು ಪಡೆಯಬಲ್ಲಿರಿ ಎಂದು. ಇದು ಒಂದು ಸೆಕೆಂಡಿನ ಮಾತಾಗಿದೆ. ಮನ್ಮನಾಭವ. ನನ್ನನ್ನು ನೆನಪು ಮಾಡಿದರೆ ನೀವು ಸೂರ್ಯವಂಶಿಯರಾಗಿಬಿಡುವಿರಿ. ಅಲ್ಲಿ ದೈವೀ ವಂಶಿಯರಿರುತ್ತಾರೆ ಮತ್ತು ಇಲ್ಲಿ ಆಸುರೀವಂಶದವರಿರುತ್ತಾರೆ. ಎಷ್ಟು ಒಳ್ಳೆಯ ರೀತಿ ತಿಳಿಸಲಾಗುತ್ತದೆ. ಕೆಲವು ವಸ್ತುವನ್ನು ಸೂಕ್ಷ್ಮ (ಶಕ್ತಿಶಾಲಿ) ವಾಗಿ ಮಾಡಲು ಅದನ್ನು ಚೆನ್ನಾಗಿ ಕುಟ್ಟಲಾಗುತ್ತದೆ. ಮನೆಯ ತಳಪಾಯವನ್ನು ಭದ್ರ ಮಾಡುವುದಕ್ಕೋಸ್ಕರ ಎಷ್ಟೊಂದು ಪರಿಶ್ರಮ ಪಡುತ್ತಾರೆ. ತಂದೆಯು ಸಹ ತಿಳಿಸುತ್ತಾರೆ - ಎಷ್ಟು ಸಾಧ್ಯವೋ ಅಷ್ಟು ನನ್ನನ್ನು ನೆನಪು ಮಾಡಿ. ಶಿವಪುರಿ ಮತ್ತು ವಿಷ್ಣುಪುರಿಯನ್ನು ನೆನಪು ಮಾಡಿ. ಅಂತರ್ಯದಲ್ಲಿ ತಮ್ಮ ಜೊತೆ ಮಾತನಾಡಿಕೊಳ್ಳಬೇಕು. ಮೊದಲು ತಮ್ಮೊಂದಿಗೆ ಚಿಂತನೆ ಮಾಡಿ ನಂತರ ಮಾತನಾಡಲಾಗುತ್ತದೆ- ತಿಳಿಸುವಸಲುವಾಗಿ. ನೀವು ಅನ್ಯರಿಗೆ ತಿಳಿಸಬೇಕಾಗಿದೆ.

ಈಗ ಮಕ್ಕಳು ಪ್ರದರ್ಶಿನಿಯಲ್ಲಿ ಎಷ್ಟೊಂದು ಪರಿಶ್ರಮಪಡುತ್ತೀರಿ. ಎಲ್ಲವೂ ತಿಳಿಸಿಕೊಡುವ ಮಾತಾಗಿದೆ. ಕೇವಲ ಘೋಷಣೆ (ಸ್ಲೋಗನ್)ಯಿಂದಂತೂ ಯಾರೂ ಅರಿತುಕೊಳ್ಳುವುದಿಲ್ಲ. ತಂದೆ ಕುಳಿತು ತಿಳಿಸುತ್ತಾರೆ ದೇವಿ-ದೇವತೆಗಳಿಗೆ ರಾಜ್ಯವು ಹೇಗೆ ಸಿಕ್ಕಿತು? ರಾಜಯೋಗವನ್ನು ಯಾರು ಕಲಿಸಿದರು? ಭಗವಾನುವಾಚ-ನಾನು ರಾಜಯೋಗವನ್ನು ಕಲಿಸುತ್ತೇನೆ, ಹೇಳುತ್ತೇನೆ ನನ್ನನ್ನು ನೆನಪು ಮಾಡಿ ಎಂದು. ಶಿವಪುರಿ ಮತ್ತು ವಿಷ್ಣುಪುರಿಯನ್ನು ನೆನಪು ಮಾಡಿ. ಈಗ ಪ್ರದರ್ಶನಿಯಲ್ಲೂ ಸಹ ಮಕ್ಕಳು ಚೆನ್ನಾಗಿ ತಿಳಿಸಬೇಕು,, ಯೋಗದ ಬಗ್ಗೆಯೂ ತಿಳಿಸಬೇಕು - ನಾವು ಸಹ ಯೋಗ ಮಾಡುತ್ತೇವೆ. ನಡೆಯುತ್ತಾ-ತಿರುಗಾಡುತ್ತಾ ತಂದೆಯನ್ನು ನೆನಪುಮಾಡುತ್ತಾ ತಂದೆಯೊಂದಿಗೆ ಮಾತನಾಡುತ್ತಾ ಇರುತ್ತೇವೆ. ಹೇಗೆ ಯಾವುದೇ ಕಾರ್ಯಕ್ರಮಕ್ಕೆ ಎಲ್ಲಿಯಾದರೂ ಹೋಗಬೇಕಾಗುತ್ತದೆಯೆಂದರೆ ಇಂದು ನಾವು ಇಂತಹವರ ಬಳಿ ಹೋಗಬೇಕೆಂದು ಬುದ್ಧಿಯಲ್ಲಿರುತ್ತದೆ. ಕಾರ್ಯಕ್ರಮ ಸಿಕ್ಕಿತೆಂದರೆ ಬುದ್ಧಿಯು ಓಡುತ್ತಿರುತ್ತದೆ. ಸಮಯವು ಹತ್ತಿರ ಬರುತ್ತೆ, ಆಗ ತಿಳಿಯುವಿರಿ ಈಗ ನಾವು ಅಲ್ಲಿಗೆ ಹೋಗಬೇಕೆಂದು ಹಾಗೆಯೇ ನಿಮಗೂ ಸಹ ಈಗ ಆಂತರ್ಯದಲ್ಲಿರ ಬೇಕು ನಾವು ತಂದೆಯ ಬಳಿ ಹೋಗಬೇಕು, ಈ ಹಳೆಯ ಪರೆಯನ್ನು ಬಿಡಬೇಕು, ಶಿವಪುರಿಗೆ ಹೋಗಬೇಕು,ಈ ರಾವಣ ಪುರಿಯನ್ನು ಬಿಡಬೇಕು, ಇದು ಬಹಳ ಪತಿತ ಕೊಳಕು

ಪ್ರಪಂಚವಾಗಿದೆ, ಈಗ ನಾವು ಸಂಗಮದಲ್ಲಿ ಕುಳಿತಿದ್ದೇವೆ, ಇದು ಕಬ್ಬಿಣಯುಗದ ಶರೀರವಾಗಿದೆ ಎಂದು. ಬಾಬಾ ಹೇಳುತ್ತಾರೆ ನನ್ನನ್ನು ನೆನಪು ಮಾಡುತ್ತಿದ್ದರೆ ನಾನು ನೀವು ಆತ್ಮಗಳನ್ನು ಶಿವಪುರಿಗೆ ಕರೆದುಕೊಂಡು ಹೋಗುತ್ತೇನೆ. ಕೃಷ್ಣನಂತೂ ಕರೆದುಕೊಂಡು ಹೋಗುವುದಿಲ್ಲ. ಅಂದರೆ ಇದು ಅನ್ಯರಿಗೆ ತಿಳಿಸುವ ಮಾತಾಗಿದೆ.

ಈಗ ತಂದೆಯು ಹೇಳುತ್ತಾರೆ-ಮಕ್ಕಳೇ, ನಾನು ಶಿವಬಾಬಾನನ್ನು ನೆನಪು ಮಾಡಿ.ಈಗ ನೀವು ರಾಜಯೋಗವನ್ನು ಕಲಿಯುತ್ತಿದ್ದೀರಿ. ನೀವೀಗ ಶಿವಪುರಿಗೆ ಬರಬೇಕಾಗಿದೆ, ನಂತರ ವಿಷ್ಣುಪುರಿಯಲ್ಲಿ ಹೋಗುವಿರಿ. ಇದನ್ನು ತಿಳಿಸುವುದಂತೂ ಬಹಳ ಸಹಜವಾಗಿದೆಯಲ್ಲವೆ. ಶಿವಪುರಿಯಾದ ಮುಕ್ತಿಯ ಮುಖಾಂತರ ವಿಷ್ಣುಪುರಿ (ಜೀವನ್ಮುಕ್ತಿ)ಯಲ್ಲಿ ಹೋಗಬೇಕಾಗಿದೆ. ಎಲ್ಲರಿಗೂ ತಂದೆ ಒಬ್ಬರೇ ಆಗಿದ್ದಾರೆ. ಮುಖ್ಯವಾಗಿ ಇದನ್ನು ತಿಳಿಸಬೇಕಾಗಿದೆ. ಬಾಕಿ ಎಷ್ಟೇ ಘೋಷಣೆ (ಸ್ಲೋಗನ್) ಇತ್ಯಾದಿಗಳನ್ನು ಬರೆಸಿ ಹಾಕಿಸುತ್ತೀರೆಂದರೆ ಅದು ವ್ಯರ್ಥವಾಗಿ ಖರ್ಚಾಗುತ್ತದೆಯಷ್ಟೇ. ಎಲ್ಲಾ ಚಿತ್ರಗಳು ನಿಮ್ಮ ಬಳಿ ಇದೆ. ಕರಾಚಿಯಲ್ಲಿ ನಿಮ್ಮ ಬಳಿ ಅನೇಕರು ಬರುತ್ತಿದ್ದರು. ದೊಡ್ಡ ಮೈದಾನದಲ್ಲಿ ಟೇಬಲ್, ಕುರ್ಚಿಗಳನ್ನು ಹಾಕಲಾಗುತ್ತಿತ್ತು. ಯಾರು ಬರುತ್ತಿದ್ದರೋ ಅವರಿಗೆ ತಿಳಿಸುತ್ತಿದ್ದೆವು. ಮೊದಲಂತೂ ಇಷ್ಟಂತೂ ಜ್ಞಾನವಿರಲಿಲ್ಲ. ಆದರೆ ಈಗ ಬಹಳ ಸಹಜವಾದ ಜ್ಞಾನವು ಸಿಕ್ಕಿದೆ. ತಂದೆಯನ್ನು ಅರಿತುಕೊಂಡಿದ್ದೀರಿ. ತಂದೆಯು ಸ್ವರ್ಗದ ರಚೈತನಾಗಿದ್ದಾರೆ. ಅವರ ಆಜ್ಞೆ ಆಗಿದೆ -ನನ್ನನ್ನು ಮತ್ತು ಆಸ್ತಿಯನ್ನು ನೆನಪು ಮಾಡಿ. ಚಿತ್ರವನ್ನು ತೋರಿಸಿ ಇದರ ಮೇಲೆ ತಿಳಿಸಿಕೊಡಿ. ಮೊದಲಂತೂ ಹೀಗೆ ತಿಳಿಸಿದಾಗ ಕೇಳುತ್ತಾ-ಕೇಳುತ್ತಾ ಧ್ಯಾನದಲ್ಲಿ ಹೋಗಿಬಿಡುತ್ತಿದ್ದರು. ಆ ಸಮಯದಲ್ಲಿ ನೀವಿನ್ನೂ ಚಿಕ್ಕ-ಚಿಕ್ಕ ಮೊಗ್ಗುಗಳಾಗಿದ್ದಿರಿ. ಎಲ್ಲವೂ ತಂದೆಯ ಚಮತ್ಕಾರವಾಗಿತ್ತು. ತಂದೆಯು ಬುದ್ಧಿರೂಪಿ ಹಗ್ಗವನ್ನು ಸೆಳೆಯುತ್ತಿದ್ದರು. ಈಗಂತೂ ಅನ್ಯರಿಗೆ ತಿಳಿಸಿಕೊಡುವುದು ಬಹಳ ಅವಶ್ಯಕತೆಯಿದೆ. ಇತ್ತೀಚಿಗಿನ ವ್ಯಕ್ತಿಗಳೂ ಸಹ ಬಹಳ ಕೆಟ್ಟವರಿರುತ್ತಾರೆ. ಅವರಿಂದ ಫಾರ್ಮ್ ತುಂಬಿಸಿಕೊಳ್ಳದ ವಿನಃ ಅವರ ಉದ್ದೇಶ ತಿಳಿಯುವುದಿಲ್ಲ. ಹೇಗೆ ಬ್ಯಾರಿಸ್ಟರ್ ಮುಂತಾದ ವಿದ್ಯೆಯನ್ನು ಓದಿಸುವ ಶಿಕ್ಷಕರಿರುತ್ತಾರಲ್ಲವೆ. ಈ ಬೇಹದ್ದಿನ ತಂದೆಯೂ ಸಹ ಎಷ್ಟು ದೊಡ್ಡ ಶಿಕ್ಷಕರಾಗಿದ್ದಾರೆ. ಆ ಶಿಕ್ಷಕರಂತೂ ಬ್ಯಾರಿಸ್ಟರನ್ನಾಗಿ ಮಾಡಬಹುದು. ಒಂದುವೇಳೆ ಶರೀರ ಬಿಟ್ಟರೆ ಆ ಬ್ಯಾರಿಸ್ಟರಿ ವಿದ್ಯೆಯು ಸಮಾಪ್ತಿಯಾಗಿಬಿಡುತ್ತದೆ. ನಂತರದ ಜನ್ಮದಲ್ಲಿಯೂ ಅದು ನಡೆಯುತ್ತದೆ ಎಂದಲ್ಲ. ಆದರೆ ಇಲ್ಲಿ ನೀವು ಏನೆಲ್ಲವನ್ನು ಮಾಡುತ್ತಿರೋ, ಅದೆಲ್ಲವನ್ನು ಜೊತೆಯಲ್ಲಿಯೇ ತೆಗೆದುಕೊಂಡು ಹೋಗುತ್ತೀರಿ. ಅಂದರೆ ಆತ್ಮದಲ್ಲಿ ಸಂಸ್ಕಾರವಿರುತ್ತದೆ. ಚಿಕ್ಕ ಮಕ್ಕಳಿಗೆ ಕರ್ಮೇಂದ್ರಿಯಗಳು ಚಿಕ್ಕದಾಗಿರುವ ಕಾರಣ ಏನನ್ನು ಹೇಳಲು ಸಾಧ್ಯವಿಲ್ಲ. ಕರ್ಮೇಂದ್ರಿಯಗಳಿಂದ ಏನನ್ನು ಮಾಡಲು ಸಾಧ್ಯವಿಲ್ಲ. ಆದರೆ ಸಂಸ್ಕಾರವಂತೂ ತೆಗೆದುಕೊಂಡು ಹೋಗುತ್ತಾರಲ್ಲವೆ. ಇದು ಅವಿನಾಶಿ ಜ್ಞಾನವಾಗಿದೆ. ಆದ್ದರಿಂದ ದೊಡ್ಡವರಾದ ಮೇಲೆ ಪುನಃ ಬಂದು ಜ್ಞಾನವನ್ನು ಪಡೆಯುತ್ತಾರೆ. ಆ ಆತ್ಮವು ಪುನಃ ಖಂಡಿತವಾಗಿ ಬರುವುದು ಒಂದಲ್ಲ ಒಂದು ಕಡೆ ಅನ್ಯರ ಕಲ್ಯಾಣ ಮಾಡುವುದು. ತನ್ನ ತಂದೆ-ತಾಯಿಯರನ್ನು ಈ ಜ್ಞಾನದ ಕಡೆ ಸೆಳೆಯುವುದು. ಭಲೇ ಚಿಕ್ಕ ಮಗುವಾಗಿರ ಬಹುದು ಆದರೂ ಸಹ ಮಮ್ಮಾ-ಬಾಬಾರವರನ್ನು ನೋಡುತ್ತಿದ್ದಂತೆ ಅವರ ಪ್ರೀತಿಯು ಆಕರ್ಷಣೆಯಾಗುವುದು. ಕರ್ಮೇಂದ್ರಿಯಗಳು ಚಿಕ್ಕದಾಗಿರುವ ಕಾರಣ ಮಾತನಾಡಲೂ ಸಾಧ್ಯವಿಲ್ಲ ಆದರೆ ಜೊತೆಗಾರರ ಕಡೆ ಪ್ರೀತಿಯೂ ಅವಶ್ಯವಾಗಿ ಹೋಗುವುದು.

ಈ ಜ್ಞಾನವು ಬಹಳ ವಿಚಿತ್ರ, ರಮಣೀಕ ಮತ್ತು ಸರಳವಾಗಿದೆ. ಕೆಲವರಂತೂ ಈ ರೀತಿಯಿದ್ದಾರೆ ಅವರು ಮುಳ್ಳುಗಳಾಗಿಯೇ ಉಳಿದುಬಿಡುತ್ತಾರೆ. ಸತ್ಯಯುಗವು ಗುಲಾಬಿ ತೋಟವಾಗಿದೆ. ಈಗಂತೂ ಮುಳ್ಳುಗಳಾಗಿದ್ದಾರೆ. ಆದರಿಂದಲೂ ಕೆಲವು ಚಿಗುರಗಳು ಹೊರಬರುತ್ತಿವೆ. ಸದಾ ಗುಲಾಬಿಗಳಂತೂ ಆಗಿದ್ದಾರೆ. ಆದರೆ ಅದರಲ್ಲಿಯೂ ನಂಬರ್ವಾರ್ ಇದ್ದಾರೆ. ಅಂತಹವರು ಪ್ರಜೆಗಳಲ್ಲಿಯೂ ಬರುತ್ತಾರಲ್ಲವೆ. ಮೊಗ್ಗುಗಳಾಗಿ ನಂತರ ಬಾಡಿಹೋದರೆ, ಅದು ವಿದ್ಯೆಯಾಯಿತೆ. ಮೊಗ್ಗು ಮೊಗ್ಗಾಗಿಯೇ ಉಳಿದುಹೋದರೆ ಅಂತಹವರು ಪ್ರಜೆಗಳಲ್ಲಿ ಹೋಗಿಬಿಡುತ್ತಾರೆ. ಯಾರು ಹೂಗಳಾಗುತ್ತಾರೆಯೋ ಅವರು ರಾಜಧಾನಿಯಲ್ಲಿ ಬರುತ್ತಾರೆ. ಬ್ರಹ್ಮಾ ತಂದೆಯು ಹೂದೋಟಕ್ಕೆ ಹೋದಾಗ ಮಕ್ಕಳಿಗೆ ತಿಳಿಸಲು ಹೂಗಳನ್ನು ತರುತ್ತಾರೆ ಒಂದುವೇಳೆ ಈಗ ಪುರುಷಾರ್ಥ ಮಾಡಿ ಹೂಗಳಾಗದಿದ್ದರೆ ಅಂತ್ಯದಲ್ಲಿ ಬಹಳ ಪಶ್ಚಾತ್ತಾಪ ಪಡಬೇಕು. ಒಂದಂತೂ ವಿಕರ್ಮಗಳ ಹೊರೆಯು ತಲೆಯ ಮೇಲೆ ಇದ್ದೇ ಇದೆ. ಮತ್ತೆ ಇನ್ನೂ ಶಿಕ್ಷೆಯನ್ನನುಭವಿಸಿ ಪ್ರಜಾಪದವಿಯನ್ನು ಪಡೆಯುವುದು ಎಂದರೆ, ಅವರು ಯಾವ ಕೆಲಸಕ್ಕೆ ಬರುತ್ತದೆ. ನಮ್ಮ ದೈವೀ ರಾಜಧಾನಿಯು ಸ್ಥಾಪನೆಯಾಗುತ್ತಿದೆ ಎಂಬುದನ್ನಂತೂ ನೀವು ತಿಳಿದುಕೊಂಡಿದ್ದೀರಿ. ಪ್ರತಿಯೊಬ್ಬರನ್ನು ತಿಳಿದುಕೊಳ್ಳಬಹುದು - ಯಾರ್ಯಾರು ಏನಾಗುತ್ತಾರೆ ? ಮನಸ್ಸಿನಲ್ಲಿರುತ್ತೆ ಇಲ್ಲಿ ನಾನು ಹೇಗೆ ಓದುತ್ತಿದ್ದೇನೆ, ಏನಾಗುತ್ತೇನೆ ? ಒಳ್ಳೆಯದು, ಚೆನ್ನಾಗಿ ಓದುವವರಿಗೆ ಒಳಗೊಳಗೆ ಪ್ರೀತಿ ಮಾಡುತ್ತಿರುತ್ತಾರೆ. ತಿಳಿಯುತ್ತಾರೆ, ಇವರು ರಾಜಧಾನಿಯಲ್ಲಿ ಬರುತ್ತಾರೆಂದು. ಮುಂದೆ ಹೋದಂತೆ ನಿಮಗೆ ಬಹಳ ಸಾಕ್ಷಾತ್ಕಾರಗಳಾಗುತ್ತವೆ. ಯಾರು ಓದುವುದಿಲ್ಲವೋ ನಂತರ ಅವರು ಬಹಳ ಪಶ್ಚಾತ್ತಾಪ ಪಡುತ್ತಾರೆ. ಸಮಯವಂತೂ ಬಹಳ ಕಡಿಮೆಯಿದೆ. ನಂತರ ಇಷ್ಟೊಂದು ಪುರುಷಾರ್ಥವನ್ನು ಹೇಗೆ ಸರಿದೂಗಿಸುತ್ತೀರಿ. ತಂದೆಯು ತಿಳಿಸುತ್ತಾರೆ - ನನ್ನ ಮಕ್ಕಳಾದ ನಂತರ ಒಂದುವೇಳೆ ವಿಕರ್ಮಗಳನ್ನು ಮಾಡುತ್ತಿರೆಂದರೆ ನೂರರಷ್ಟು ಶಿಕ್ಷೆಯನ್ನಭವಿಸಬೇಕಾಗುತ್ತದೆ. ಜೈಲಿಗೆ ಹೋಗಿಬರುವಂತಹ ಕೆಲವು ಕಳ್ಳರಿಗೆ ಜೈಲಿಗೆ ಹೋಗುವುದು ಮತ್ತು ಬರುವುದು ಸರ್ವೆಸಾಮಾನ್ಯವಾಗಿಬಿಟ್ಟಿರುತ್ತದೆ.

ಈಗ ನೀವು ಶ್ರೇಷ್ಠಾತಿ ಶ್ರೇಷ್ಠ ಸೂರ್ಯವಂಶಿ ಮಹಾರಾಜ-ಮಹಾರಾಣಿ ಆಗುವ ಪುರುಷಾರ್ಥವನ್ನು ಮಾಡುತ್ತಿದ್ದೀರಿ. ನಂಬರ್ವಾರಂತೂ ಇರುವರಲ್ಲವೆ. ಯಾರು ಇಲ್ಲಿಂದ ಬಿಟ್ಟು ಓಡಿ ಹೋಗುತ್ತಾರೋ ಅವರದು ಯಾವ ಸ್ಥಿತಿಯಾಗಬಹುದು! ತಂದೆಯು ಎಷ್ಟು ಒಳ್ಳೆಯ ರೀತಿ ತಿಳಿಸುತ್ತಾರೆ ಆದರೆ ಅದೃಷ್ಟದಲ್ಲಿ ಇಲ್ಲವೆಂದರೆ ತಿಳಿದುಕೊಳ್ಳುವುದಿಲ್ಲ. ಅಂದಮೇಲೆ ಅದೃಷ್ಟವನ್ನು ರೂಪಿಸುವ ತಂದೆಯು ಸಹ ಏನು ಮಾಡಲು ಸಾಧ್ಯ! ತಂದೆಯಂತೂ ಹೇಳುತ್ತಾರೆ - ಮಕ್ಕಳೇ ಹೂಗಳಾಗಿ, ತಂದೆಯನ್ನು ಮರೆಯಬೇಡಿ. ಇಂತಹ ತಂದೆಯ ಕೈಯನ್ನೆಂದೂ ಬಿಡಬಾರದು. ಮಾಯಾ ಮೊಸಳೆಯು ಹಸಿಯಾಗಿಯೇ ತಿಂದುಬಿಡುವುದು. ಇಂತಹ ಯಾವುದೇ ತಪ್ಪು ಮಾಡಬೇಡಿ ಅದರಿಂದ ನಿಮ್ಮ ರಾಜ್ಯಭಾಗ್ಯವನ್ನು ಕಳೆದುಕೊಂಡು ಕುಳಿತುಕೊಳ್ಳುವಂತಹದು. ನಂತರ ಕಲ್ಪ-ಕಲ್ಪಾಂತರವೂ ಇಂತಹ ಚಲನೆಯೇ ಕಂಡುಬರುವುದು. ಯಾವುದನ್ನು ಈಗ ನೋಡುತ್ತೀರಿ. ಕೆಲವರದು ಸತೋಪ್ರಧಾನ ಚಲನೆಯಾಗಿದೆ, ಕೆಲವರದು ರಜೋ, ಇನ್ನೂ ಕೆಲವರದು ತಮೋ ಆಗಿದೆ.... ಗ್ರಹಚಾರಿಯೂ ಸಹ ಒಳ್ಳೊಳ್ಳೆಯ ಮಕ್ಕಳ ಮೇಲೂ ಬಹಳ ಕಠಿಣವಾಗಿ ಕುಳಿತುಬಿಡುತ್ತದೆ. ಒಳಗಿಂದ ಕಪ್ಪಾಗಿರುತ್ತಾರೆ ಮತ್ತು ಹೊರಗಡೆ ಚೆನ್ನಾಗಿರುತ್ತಾರೆ. ತಪ್ಪುಗಳಾಗುತ್ತಿದ್ದರೆ ಆತ್ಮವು ಕಪ್ಪಾಗಿಬಿಡುವುದು. ಅವರ ಪ್ರತಿಬಿಂಬವೂ ಕಪ್ಪಾಗಿಬಿಡುತ್ತದೆ ಆದ್ದರಿಂದ ಬಾಬಾ ಹೇಳುತ್ತಾರೆ-ಒಂದು ಕಿವಿಯಿಂದ ಕೇಳಿ ಇನ್ನೊಂದು ಕಿವಿಯಿಂದ ತೆಗೆದುಹಾಕಿ ಆಸುರಿ ಮಾತುಗಳಿಗೆ ಕಿವಿಗಳನ್ನು ಮುಚ್ಚಿಕೊಳ್ಳಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1.ಸದಾ ವಿಕರ್ಮ ವಿನಾಶ ಮಾಡಿಕೊಳ್ಳುವ ಗುಂಗಿನಲ್ಲಿರಬೇಕಾಗಿದೆ. ಈಗ ಯಾವುದೇ ವಿಕರ್ಮವು ಆಗದಂತೆ ಸಂಭಾಲನೆ ಮಾಡಬೇಕಾಗಿದೆ.

2.ಮಾಯೆಯ ಗ್ರಹಚಾರಿಯಿಂದ ಪಾರಾಗಲು ಆಸುರೀ ಮಾತುಗಳಿಗೆ ಕಿವಿಗಳನ್ನು ಮುಚ್ಚಿಕೊಳ್ಳಬೇಕಾಗಿದೆ. ತಮ್ಮ ನಡವಳಿಕೆಯನ್ನು ಸತೋಪ್ರಧಾನ ಮಾಡಿಕೊಳ್ಳಬೇಕಾಗಿದೆ. ಒಳಗೂ-ಹೊರಗೂ ಪರಿಶುದ್ಧವಾಗಿರಬೇಕಾಗಿದೆ.

ವರದಾನ: ಬ್ಯಾಲೆನ್ಸ್ ಮುಖಾಂತರ ಜೀವನದ ಸಾಕ್ಷಾತ್ಕಾರ ಮಾಡಿಸುವಂತಹ ಸರ್ವರಿಂದ ಬ್ಲೆಸ್ಸಿಂಗ್ (ಆಶೀರ್ವಾದ)ಗೆ ಪಾತ್ರ ಭವ.

ಬ್ಯಾಲೆನ್ಸ್ ಎಲ್ಲದಕ್ಕಿಂತಲೂ ದೊಡ್ಡ ಕಲೆಯಾಗಿದೆ. ನೆನಪು ಮತ್ತು ಸೇವೆಯ ಬ್ಯಾಲೆನ್ಸ್ ಇದ್ದಾಗ ತಂದೆಯಿಂದ ಬ್ಲೆಸ್ಸಿಂಗ್ಸ್ ಸಿಗುತ್ತಿರುವುದು. ಪ್ರತಿ ಮಾತಿನ ಬ್ಯಾಲೆನ್ಸ್ ನಿಂದ ಸಹಜವಾಗಿ ನಂಬರ್ಒನ್ ಆಗಿ ಬಿಡುವಿರಿ. ಬ್ಯಾಲೆನ್ಸ್ ಅನೇಕ ಆತ್ಮಗಳನ್ನು ಮುಂದೆ ಬ್ಲಿಸ್ಫುಲ್ ಜೀವನದ ಸಾಕ್ಷಾತ್ಕಾರ ಮಾಡಿಸುವುದು. ಬ್ಯಾಲೆನ್ಸ್ ಅನ್ನು ಸದಾ ಸ್ಮೃತಿಯಲ್ಲಿಡುತ್ತಾ ಸರ್ವ ಪ್ರಾಪ್ತಿಗಳ ಅನುಭವ ಮಾಡುತ್ತಿರಿ. ಆಗ ಸ್ವಯಂ ಸಹ ಮುಂದುವರೆಯುತ್ತಿರುವಿರಿ ಮತ್ತು ಅನ್ಯ ಆತ್ಮಗಳನ್ನೂ ಸಹ ಮುಂದುವರೆಸುವಿರಿ.

ಸ್ಲೋಗನ್: ಮಹಾವೀರರು ಇವರೇ ಆಗಿದ್ದಾರೆ ಯಾರು ಎಲ್ಲಾ ಕಷ್ಟಗಳನ್ನು ಸಹಜ ಮಾಡಿಕೊಂಡು, ಬೆಟ್ಟವನ್ನು ಸಣ್ಣ ಕಲ್ಲು ಅಥವಾ ಹತ್ತಿಯನ್ನಾಗಿ ಮಾಡುತ್ತಾರೆ.